11	ಜನತಾ ಬಜಾರ್	ಹುಬ್ಬಳ್ಳಿ	3.22	--
12	ಜನತಾ ಬಜಾರ್	ಚಾಮರಾಜನಗರ	6.07	--
ಕರ್ನಾಟಕ ಸಹಕಾರಿ ಗ್ರಾಹಕರ ಮಹಾಮಂಡಳ ಪ್ರಾದೇಶಿಕ ಶಾಖೆಗಳು				
13	ಕ.ಸ.ಗ್ರಾ.ಮ. ಶಾಖೆ	ಹೊಸಪೇಟೆ	7.02	--
14	ಕ.ಸ.ಗ್ರಾ.ಮ. ಶಾಖೆ	ಕಾರವಾರ	0.84	--
15	ಕ.ಸ.ಗ್ರಾ.ಮ. ಶಾಖೆ	ಚಿಕ್ಕಬಳ್ಳಾಪುರ	1.55	--
16	ಕ.ಸ.ಗ್ರಾ.ಮ. ಶಾಖೆ	ಹಾಸನ	1.40	--
17	ಕ.ಸ.ಗ್ರಾ.ಮ. ಶಾಖೆ	ಮೈಸೂರು	1.41	--
18	ಕ.ಸ.ಗ್ರಾ.ಮ. ಶಾಖೆ	ಕೋಲಾರ	2.24	--
19	ಕ.ಸ.ಗ್ರಾ.ಮ. ಶಾಖೆ	ಬಾಗಲಕೋಟೆ	0.19	--
		ಕೇಂದ್ರ ಕಛೇರಿ	35.71	--
		ಒಟ್ಟು	**108.74**	**2.13**

ರಾಜ್ಯ ಹೆದ್ದಾರಿ ದುರಸ್ತಿ

551 (769) ಶ್ರೀ ರವಿ. ಸಿ.ಟಿ. (ಚಿಕ್ಕಮಗಳೂರು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಡೂರು ಮಂಗಳೂರು ರಾಜ್ಯ ಹೆದ್ದಾರಿ ಶಿಥಿಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ರಸ್ತೆಯ ಅಭಿವೃದ್ಧಿಗೆ ಇಲಾಖೆ ಕೈಗೊಂಡಿರುವ ಕ್ರಮಗಳೇನು; ಯಾವಾಗ ಅಭಿವೃದ್ಧಿ ಪಡಿಸಲಾಗುವುದು; ಹೇಗೆ ಅಭಿವೃದ್ಧಿಪಡಿಸಲಾಗುವುದು (ವಿವರ ನೀಡುವುದು)?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಕಡೂರು ಮಂಗಳೂರು ಹೆದ್ದಾರಿಯು ಕಡೂರು ಕಾಂಗಾಡ್ ರಾಜ್ಯ ಹೆದ್ದಾರಿ ಸಂಖ್ಯೆ:64 ಎಂಬುದಾಗಿ ನಾಮಾಂಕಿತಗೊಂಡಿದ್ದು ಒಟ್ಟಾರೆ 165.80 ಕಿಮೀ ಗಳಷ್ಟು ಉದ್ದವಿದ್ದು ಚಿಕ್ಕಮಗಳೂರು ಜಿಲ್ಲೆಯಲ್ಲಿ 99.27

ಕಿಮೀ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 66.53 ಕಿಮೀಗಳಷ್ಟು ಹಾದು ಹೋಗುತ್ತದೆ. ಈ ರಸ್ತೆಯಲ್ಲಿ 15000 ಕ್ಕೂ ಅಧಿಕ ಪಿ.ಸಿ.ಯು.ಗಳ ವಾಹನ ಸಾಂದ್ರತೆ ಇದ್ದು ಈ ರಸ್ತೆಯು ರಾಷ್ಟ್ರೀಯ ಹೆದ್ದಾರಿ–13, ರಾಷ್ಟ್ರೀಯ ಹೆದ್ದಾರಿ–17 ಗಳಿಗೆ ಸಂಪರ್ಕ ಕಲ್ಪಿಸುವುದಾಗಿರುತ್ತದೆ. ಭಾರತ ಸರ್ಕಾರದ ದಿನಾಂಕ: 25–2–2009ರ ಅಧಿಸೂಚನೆಯಲ್ಲಿ ಸದರಿ ಕಡೂರು ಮಂಗಳೂರು ಹೆದ್ದಾರಿಯು ಭಾಗಶಃ ಉದ್ದವು ರಾಷ್ಟ್ರೀಯ ಹೆದ್ದಾರಿ 234 ಮಂಗಳೂರು ತಿರುವಣ್ಣಾಮಲೈ ಎಂಬುದಾಗಿ ಮೇಲ್ದರ್ಜೆಗೊಂಡಿರುತ್ತದೆ. ಹೀಗೆ ಮೇಲ್ದರ್ಜೆಗೊಂಡಿರುವ ರಸ್ತೆಯಲ್ಲಿ ತುಳು ಸಮ್ಮೇಳನದ ಕಾಮಗಾರಿಗಳು ಪ್ರಗತಿಯಲ್ಲಿರುವ ಭಾಗಗಳನ್ನು ಹೊರತುಪಡಿಸಿ, ಉಳಿದ ರಸ್ತೆ ಭಾಗಗಳನ್ನು ಕೂಡಲೇ ರಾಷ್ಟ್ರೀಯ ಹೆದ್ದಾರಿ ವಲಯಕ್ಕೆ ಹಸ್ತಾಂತರಿಸಲು ದಿನಾಂಕ: 02.03.2010 ರಂದು ಸರ್ಕಾರದಿಂದ ನಿರ್ದೇಶನ ನೀಡಲಾಗಿದೆ. ಹಾಗೂ ಸರ್ಕಾರದ ನಿರ್ದೇಶನದಂತೆ ಹಸ್ತಾಂತರಿಸುವ ಪ್ರಕ್ರಿಯೆ ಜಾರಿಯಲ್ಲಿದ್ದು, ಸಾಕಷ್ಟು ರಸ್ತೆ ಭಾಗಗಳನ್ನು ಈಗಾಗಲೇ ಹಸ್ತಾಂತರಿಸಲಾಗಿದೆ. ತುಳು ಸಮ್ಮೇಳನದ ಸಲುವಾಗಿ ಕೈಗೊಂಡಿರುವ ಕಾಮಗಾರಿಗಳು ಪೂರ್ಣಗೊಂಡ ನಂತರ ಕೂಡಲೇ ಅವುಗಳನ್ನು ಸಹ ರಾಷ್ಟ್ರೀಯ ಹೆದ್ದಾರಿ ವಲಯಕ್ಕೆ ವರ್ಗಾಯಿಸಲಾಗುವುದು. ಆದ್ದರಿಂದ ಸದರಿ ರಸ್ತೆಯ ಅಭಿವೃದ್ಧಿಯನ್ನು ಇನ್ನು ಮುಂದೆ ರಾಷ್ಟ್ರೀಯ ಹೆದ್ದಾರಿ ವಲಯದಿಂದ ಕೈಗೊಳ್ಳಬೇಕಿದೆ.

ಈ ರಸ್ತೆಯ ಚಿಕ್ಕಮಗಳೂರು ವಿಭಾಗದ ವ್ಯಾಪ್ತಿಯಲ್ಲಿ ಕೆಳಕಂಡಂತೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಿದೆ.

1) ಕೇಂದ್ರ ರಸ್ತೆ ನಿಧಿಯಡಿ 4.15 ಕಿಮೀ ಗಳ ಉದ್ದವನ್ನು ರೂ.200.00 ಲಕ್ಷಗಳಲ್ಲಿ ಹಾಗೂ
2) 5054– ಇತರೆ ರಸ್ತೆ ನಿರ್ಮಾಣ ಶೀರ್ಷಿಕೆಯಡಿ 0.75 ಕಿಮೀ ಉದ್ದವನ್ನು ರೂ.50.00 ಲಕ್ಷಗಳಲ್ಲಿ ಅಭಿವೃದ್ಧಿಗೊಳಿಸಲಾಗುತ್ತಿದ್ದು ಪೂರ್ಣಗೊಳ್ಳುವ ಹಂತದಲ್ಲಿದೆ.
3) ಉಳಿದಂತೆ ಪ್ರಸಕ್ತ ಸಾಲಿನಲ್ಲಿ ರೂ.26.80 ಲಕ್ಷ ಮೊತ್ತದಲ್ಲಿ ರಸ್ತೆಗಳ ಗುಂಡಿಗಳನ್ನು ಮುಚ್ಚಿ ನಿರ್ವಹಣೆ ಮಾಡಿ ವಾಹನ ಸಂಚಾರಕ್ಕೆ ಯೋಗ್ಯವಾಗಿಡಲಾಗಿರುತ್ತದೆ.

ಮೇಲೆ ತಿಳಿಸಿದಂತೆ ಎಲ್ಲಾ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಶೀಘ್ರದಲ್ಲಿ ಪೂರ್ಣಗೊಳಿಸಲಾಗುವುದು.